ಮೂಸ ಆ ಊರಿಗೆ ಬಂದು ನೆಲೆಸಿದಾಗ ಅಲ್ಲಿ ಅವನದ್ದು ಒಂದೇ ಮುಸಲಮಾನ ಸಂಸಾರ. ಅವನ ಸ್ವಂತ ಊರು ಕೇರಳದ ಪೊನ್ನಾಣಿಯೋ ಮಲ್ಲಪ್ಪುರಮ್ಮೋ. ಅವನಿಗೆ ಹರುಕು ಮುರುಕು ಕನ್ನಡವೂ ಬರುತ್ತಿತ್ತು. ಊರಿಗೆ ಪ್ರವೇಶಿಸುವಾಗಲೇ ರಸ್ತೆ ಬದಿಯಲ್ಲಿರುವ ಒಂದು ಪುರಾತನ ಅಶ್ವತ್ಥದ ಮರದ ನೆರಳಿನಲ್ಲಿ ಅವನ ಅಂಗಡಿ. ಅಂಗಡಿ ಆರಂಭವಾಗುವಾಗ ಎರಡು ಬೆತ್ತದ ಬುಟ್ಟಿಗಳಲ್ಲಿ ಸೌತೆಕಾಯಿ, ಕುಂಬಳಕಾಯಿ, ಸುವರ್ಣಗೆಡ್ಡೆ ಮುಂತಾದ ಬೇಗ ಹಾಳಾಗದ ತರಕಾರಿಗಳು; ಜೊತೆಯಲ್ಲಿ ಬೀಡಿ, ಬೆಂಕಿ ಪೊಟ್ಟಣ, ಎಲೆ ಅಡಿಕೆ ಸುಣ್ಣ, ಗುಟಕಾದ ಮಾಲೆಗಳು, ಅಷ್ಟೆ. ಒಂದು ಗೋಣೀಚೀಲ ಹಾಸಿ ಅವನು ಅವುಗಳ ಎದುರು ಕೂರುತ್ತಿದ್ದ.

ರಸ್ತೆಯ ಆ ಜಾಗದಿಂದಲೇ ಒಂದು ಮಣ್ಣಿನ ರಸ್ತೆ ಆ ಊರಿನ ಏಕಮಾತ್ರ ಪಿಯು ಕಾಲೇಜಿನ ಕಡೆಗೆ ತಿರುಗುತ್ತಿತ್ತು. ಅವನ ಅಂಗಡಿಯ ಹತ್ತಿರದಲ್ಲಿಯೇ ಕ್ಯಾಥೊಲಿಕ್ ಸಂಪ್ರದಾಯದವರ ಒಂದು ಚರ್ಚು. ಆ ಕಡೆ ಈ ಕಡೆ ಕೆಲವು ದೊಡ್ಡ ದೊಡ್ಡ ಹಿತ್ತಲುಗಳುಳ್ಳ ಮನೆಗಳು. ಆ ಮನೆಗಳು ಹಳೆಯ ಹಂಚಿನ ಮನೆಗಳಾಗಿದ್ದು ಅವುಗಳ ಮಾಲೀಕರು ಒಂದು ಭಾಗವನ್ನು ಬಾಡಿಗೆಗೆ ಕೊಡುವ ವ್ಯವಸ್ಥೆ ಮಾಡಿದ್ದರು. ಹಾಗಾಗಿ ಕಾಲೇಜಿನ ಪ್ರಾಧ್ಯಾಪಕರು, ದೂರದ ಊರಿನಿಂದ ಬಂದ ವಿದ್ಯಾರ್ಥಿಗಳು ಅವುಗಳಲ್ಲಿ ವಾಸಕ್ಕಿದ್ದರು. ಊರಿನಿಂದ ತುಸು ದೂರದಲ್ಲಿ ಅವೆಲ್ಲ ಇದ್ದು ಅವರೆಲ್ಲ ಮೂಸನ ಅಂಗಡಿಯ ಗಿರಾಕಿಗಳಾಗಿ ಅವನ ಅಂಗಡಿ ಬೆಳೆದಿತ್ತು. ಬೆಳೆದಂತೆ ಅಲ್ಲಿ ಸಿಗುವ ಸರಕುಗಳ ಸಂಖ್ಯೆ ಹೆಚ್ಚಾಯಿತು. ಎಲ್ಲಿಂದಲೋ ಮೂರು ಅಡಿಕೆಯ ಕಾಂಡಗಳನ್ನು ತಂದು ಅವುಗಳಲ್ಲಿ ಎರಡನ್ನು ಹೂತು ಒಂದನ್ನು ಆಳೆತ್ತರ ಅಡ್ಡಲಾಗಿ ಕಟ್ಟಿ ಅವುಗಳ ಮೇಲೆ ಗುಟಕಾದ ಮಾಲೆಗಳು, ಒಂದು ಬಾಳೆಹಣ್ಣಿನ ಗೊನೆ, ಹತ್ತು ಜೋಡಿ ಚಪ್ಪಲಿಗಳು ಇವನ್ನೆಲ್ಲ ನೇಲಿಸಿ ಅವನು ಅಂಗಡಿಗೆ ಒಂದು ರೂಪ ಕೊಟ್ಟ. ಕದ್ದು ಮುಚ್ಚಿ ಸೇದುವ ವಿದ್ಯಾರ್ಥಿಗಳಿಗಾಗಿ ಕೆಲವು ಸಿಗರೇಟು ಪೊಟ್ಟಣಗಳನ್ನೂ, ಒಂದು ದೊಡ್ಡ ಥರ್ಮಾಸನ್ನೂ ಒಂದು ಚಿಮಿಣಿ ಎಣ್ಣೆಯ ಸ್ಟೌಅನ್ನೂ ತಂದು ಬಿಳಿಯ ಪೇಪರ್ ಗ್ಲಾಸುಗಳಲ್ಲಿ ಚಾ ಕೊಡುವ ವ್ಯವಸ್ಥೆಯನ್ನೂ ಮಾಡಿದ್ದ. ಈಗ ಅಂಗಡಿ ಸಾಕಷ್ಟು ದೊಡ್ಡದಾಗಿದೆ.

ಅವನು ಈ ಥರ ಅಂಗಡಿಯನ್ನು ಸ್ಥಾಪಿಸಿದ ಮೊದಲ ದಿನಗಳಲ್ಲೇ ಒಂದು ಜಗಳ ನಡೆಯಿತೆಂದು ನೆನಪಿದ್ದವರು ಹೇಳುತ್ತಾರೆ. ಊರಿನ ಸಣ್ಣ ಹಿಡುವಳಿದಾರನೊಬ್ಬ ಆ ಅಡಿಕೆಯ ಕಾಂಡಗಳನ್ನು ತನ್ನ ಮನೆಯಿಂದ ಕದ್ದುದೆಂದು ಮೂಸನೊಡನೆ ಜಗಳಕ್ಕೆ ನಿಂತ. ಆದರೆ ಊರವರ ಮಧ್ಯಸ್ಥಿಕೆಯಿಂದ ಒಂದು ಸಣ್ಣ ಮೊತ್ತದ ಪರಿಹಾರ ಕೊಡಿಸುವುದರೊಂದಿಗೆ ಆ ಜಗಳವೇನೋ ಮುಕ್ತಾಯವಾಯಿತು. ಆದರೆ ಮೂಸ ಕಳ್ಳತನದ ಮಾಲಿನೊಡನೆ ಅಂಗಡಿ ಇಟ್ಟುದಾಗಿಯೂ ಅದಕ್ಕಾಗಿ ಒಂದಿಷ್ಟೂ ಮೂಲಧನ ಹಾಕಿದವನಲ್ಲ ಎಂದೂ ಪುಕಾರು ಹುಟ್ಟಿತು.